

# ಮೂರು ಬೊಂಬೆಗಳು

■ ಶಶಿರೇಖಾ ನಾಗೇಂದ್ರ

ಕೃಷ್ಣದೇವರಾಯನ ಆಸ್ಥಾನಕ್ಕೆ ಗೊಂಬೆ ಮಾರುವವನೊಬ್ಬ ಬಂದನು. ಅವನು ಮೂರು ಗೊಂಬೆಗಳನ್ನು ಆಸ್ಥಾನದಲ್ಲಿ ಪ್ರದರ್ಶನಕ್ಕೆ ಇಟ್ಟನು. ಮೊದಲ ಗೊಂಬೆಯ ಕಿವಿಯಲ್ಲಿ ದಾರ ತೂರಿಸಿದರೆ ದಾರ ಇನ್ನೊಂದು ಕಿವಿಯಲ್ಲಿ ಹೊರಬರುತ್ತಿತ್ತು. ಎರಡನೆಯ ಬೊಂಬೆಗೆ ಕಿವಿಯಲ್ಲಿ ತೂರಿಸಿದ ದಾರ ಬಾಯಲ್ಲಿ ಹೊರಬರುತಿತ್ತು. ಮೂರನೆಯ ಗೊಂಬೆಯ ಕಿವಿಯಲ್ಲಿ ತೂರಿಸಿದ ದಾರ ಹೊರಕ್ಕೆ ಬರದೆ ಹೊಟ್ಟೆಯೊಳಗೆ ಹೊಗುತಿತ್ತು.

ಅಕ್ಕಸಾಲಿ ಈ ಮೂರು ಬೊಂಬೆಗಳಲ್ಲಿ ಇರುವ ತಾರತಮ್ಯವನ್ನು ಬಿಡಿಸಿ ಹೇಳಬೇಕೆಂದು ರಾಜನನ್ನು ಕೋರಿದನು. ರಾಜನು ಸಭೆಯಲ್ಲಿದ್ದ ಪಂಡಿತ ಪಾಮರರನ್ನೆಲ್ಲ ಕೇಳಿದನು ಒಬ್ಬೊಬ್ಬರು ಒಂದೊಂದು ಉತ್ತರ ಕೊಟ್ಟರು ಅಕ್ಕಸಾಲಿಗೆ ಅವರ ಉತ್ತರದಿಂದ ತೃಪ್ತಿಯಾಗಲಿಲ್ಲ ಉತ್ತರ ಸರಿಯಿಲ್ಲ ಎಂದು ತಲೆಯಾಡಿಸಿದನು. ತೆನಾಲಿ ರಾಮಕೃಷ್ಣ ಅಂದು ರಾಜಸಭೆಗೆ ಬಂದಿರಲಿಲ್ಲ. ಅಕ್ಕಸಾಲಿಯೂ 'ಮಹಾರಾಜರೆ, ಈ ಗೊಂಬೆಗಳನ್ನು ನೀವೆ ತೆಗೆದುಕೊಳ್ಳಿ' ಎಂದನು. ರಾಜನಿಗೂ ಸರಿ ಎನಿಸಿ ಆ ಮೂರು ಗೊಂಬೆಗಳ ಬೆಲೆ ಏನೆಂದು ಕೇಳಿದನು.

'ಮಹಾರಾಜರೆ, ಮೊದಲ ಗೊಂಬೆಗೆ ಒಂದು ತ್ರಾಮದ ನಾಣ್ಯ ಅಷ್ಟೇ, ಎರಡನೆಯ ಬೊಂಬೆಗೆ ಒಂದು ಹಿತ್ತಾಳೆ ನಾಣ್ಯ, ಮೂರನೆಯ ಬೊಂಬೆಗೆ ಲಕ್ಷವರಹ' ಎಂದನು. ಬೊಂಬೆಯ ಬೆಲೆ ಕೇಳಿ ರಾಜನಿಗೆ ಇದರಲ್ಲಿ ಏನೂ ರಹಸ್ಯವಿದೆ ಎಂದುಕೊಂಡು ಅಕ್ಕಸಾಲಿಗೆ ನಾಳಿನ ರಾಜಸಭೆಯಲ್ಲಿ ಹಣ ಕೊಡುವೆ ಅಲ್ಲಿಯವರೆಗೆ ನೀನು ಇಲ್ಲಿಯೇ ಇದ್ದು ವಿಶ್ರಾಂತಿ ಪಡೆ ಎಂದನು.

ಮಹಾರಾಜರು ಅಂದು ರಾತ್ರಿ ತೆನಾಲಿ ರಾಮಕೃಷ್ಣನನ್ನು ಕರೆಸಿ ಅಕ್ಕಸಾಲಿಯ ಬೊಂಬೆಯ ವಿಷಯ ತಿಳಿಸಿ ಆ ಬೊಂಬೆಗಳಲ್ಲಿರುವ ರಹಸ್ಯವನ್ನು ಕಂಡು ಹಿಡಿಯುವಂತೆ ಹೇಳಿದರು. ತೆನಾಲಿ ಸರಿಯೆಂದು ಒಪ್ಪಿಕೊಂಡನು.

ಮರುದಿನ ರಾಜಸಭೆಯಲ್ಲಿ ತೆನಾಲಿಯೂ ಅಕ್ಕಸಾಲಿಯ ಬೊಂಬೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದನು. ನಂತರ ಮೊದಲೆರಡು ಬೊಂಬೆಗಳಿಗೆ ಅವನು ಕೇಳಿದ್ದ ಹಣ ಕೊಡಬಹುದು ಮೂರನೆಯ ಬೊಂಬೆಗೆ ಬೆಲೆ ಕಟ್ಟಲಾರದ ಬೊಂಬೆಯಿದು ಎಂದಾಗ ರಾಜನಿಗೆ ಆಶ್ಚರ್ಯವಾಯಿತು. ಮೂರನೆಯ ಬೊಂಬೆಯಲ್ಲಿ ಅಂತಹ ವಿಶೇಷವೇನು ಎಂದು ಕೇಳಿದನು.

ಮಹಾರಾಜರೆ, ಮೊದಲ ಬೊಂಬೆಯು ಈ ಕಿವಿಯಲ್ಲಿ ಕೇಳಿದುದನ್ನು ಆ ಕಿವಿಯಿಂದ ಬಿಡುವ ಮನುಷ್ಯನನ್ನು ಸೂಚಿಸುತ್ತದೆ. ಬುದ್ಧಿ ಮಾತಾದರೂ ಅಷ್ಟೇ ಅಂತಹ ಬೊಂಬೆಯ ಬೆಲೆ ಕೇವಲ ಒಂದು ತಾಮ್ರದ ನಾಣ್ಯ. ಎರಡನೆಯ ಬೊಂಬೆ ಕಿವಿಯಲ್ಲಿ ಕೇಳಿದ್ದನ್ನು ಇತರರಿಗೆ ಚಾಡಿ ಹೇಳುವ ಮನುಷ್ಯನನ್ನು ಸೂಚಿಸುತ್ತದೆ. ಹಾಗಾಗಿ ಅದರ ಬೆಲೆ ಕೇವಲ ಒಂದು ಹಿತ್ತಾಳೆಯ ನಾಣ್ಯ. ಮೂರನೆಯ ಬೊಂಬೆ ತಾನು ಕೇಳಿದ್ದನು ಯಾರಿಗೂ ಹೇಳದೆ ಮನದಲ್ಲಿಯೇ ಇಟ್ಟುಕೊಳ್ಳುವ ಹೇಳಿಕೆ ಮಾತನ್ನು ಕೇಳದೆ ತನ್ನ ಕೆಲಸ ತಾನು ಮಾಡುವ ಮನುಷ್ಯನನ್ನು ಸೂಚಿಸುತ್ತದೆ. ಅದಕ್ಕೆ ಈ ಬೊಂಬೆಗೆ ಬೆಲೆ ಕಟ್ಟಲಾಗದು ಎಂದನು. ಆಗ ಅಕ್ಕಸಾಲಿಯೂ ಪ್ರಭು, ಈ ಬೊಂಬೆಗಳನ್ನು ಮಾಡುವಾಗ ನನ್ನಲ್ಲಿದ್ದ ಭಾವನೆಯನ್ನು ಮಹಾಕವಿಗಳು ಸೊಗಸಾಗಿ ವಿವರಿಸಿದರು ಎಂದನು. ರಾಜನು ಅಕ್ಕಸಾಲಿಗೆ ಬಹುಮಾನ ಕೊಟ್ಟನು. ತೆನಾಲಿಯ ಬುದ್ಧಿವಂತಿಕೆಯನ್ನು ಹೊಗಳಿದನು.

■